**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ** : ಒಂದು ಏನು ಅರ್ಧಕ್ಕೆ ಕನ್ ಸೀಡ್ ಮಾಡಿದ್ದೀರಿ. ಇನ್ನೊಂದಕ್ಕೆ ಯಾಕೇ?

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** : ಎಲ್ಲಾ ಇಲ್ಲೇ ಇದ್ದೀರಿ.

(+ ಸನ್ಮಾನ್ಯ ಮುಖ್ಯ ಮಂತ್ರಿಯವರಿಂದ ಪರಿಷ್ಕರಣಗೊಂಡಿದೆ.)

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ** : ಕಾಂಪನ್ ಸೇಷನ್ ಕೊಡುವುದಕ್ಕೆ ಒಪ್ಪಿಕೊಂಡಿ ದ್ದೀರಿ, ಥ್ಯಾಂಕ್ಸ್. ಏಕೆಂದರೆ, ಇಡೀ ರಾಜ್ಯದಲ್ಲಿ ಅದನ್ನು ಒಂದು ತಪ್ಪು ಮಾಹಿತಿ ಹೋಗುತ್ತದೆ. ಅದರ ಬಗ್ಗೆ ನೀವು ಎನ್‌ಕ್ವಯರಿ ಮಾಡಿಸುತ್ತೇನೆಂದರೆ, ಇದರಿಂದ ಸತ್ಯಾಂಶವು ಹೊರಗೆ ಬರುತ್ತದೆ. ಅದನ್ನು ಮಾಡುವುದಕ್ಕೆ ಆಗುವುದಿಲ್ಲವೆಂದರೆ.....

**ಶ್ರೀ ಹೆಚ್.ಡಿ. ಕುಮಾರಸ್ವಾಮಿ** : ಅದರ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿ ರುವುದರಿಂದ ಈಗ ತನಿಖೆಯ ಅವಶ್ಯಕತೆ ಇಲ್ಲ.

(+ ಸನ್ಮಾನ್ಯ ಮುಖ್ಯ ಮಂತ್ರಿಯವರಿಂದ ಪರಿಷ್ಕರಣಗೊಂಡಿದೆ.)

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ** : ನಿಮಗೆ ಅದೇ ರಿಪೋರ್ಟ್‌ನ್ನು ಸರಿಯಾದ ರೀತಿಯಲ್ಲಿ ಪ್ರಿಂಟ್ ಹಾಕಿ ಕೊಡುತ್ತಾರೆ. ನೀವು ಅದನ್ನೇ ನಮಗೆ ಒಪ್ಪಿಸುವುದು. ನೀವು ತನಿಕೆ ಮಾಡಿಸುವುದಿಲ್ಲವೆಂದರೆ ನಾವು ಅನಿವಾರ್ಯವಾಗಿ ವಾಕ್‌ಔಟ್‌ನ್ನು ಮಾಡಬೇಕಾಗುತ್ತದೆ.

(ಈ ಹಂತದಲ್ಲಿ ಕಾಂಗ್ರೇಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

## 6. ಪ್ರಕಟಣೆ

**ಉಪಾಧ್ಯಕ್ಷರು** : ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವಂತಹ ಸಂದೇಶದಲ್ಲಿ ಕರ್ನಾಟಕ ವಿಧಾನಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆಯ ನಿಯಮ 118ರ ಮೇರೆಗೆ ವಿಧಾನಪರಿಷತ್ತು 2006ನೇ ಸಾಲಿನ ಕರ್ನಾಟಕ ವಿಧಾನಮಂಡಲ (ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕವನ್ನು ಈ ದಿನ ದಿನಾಂಕ :6ನೇ ಜೂನ್ 2006 ರಂದು ಯಾವುದೇ ತಿದ್ದುಪಡಿಗಳು ಇಲ್ಲದೆ ಅಂಗೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ. ಹಾಗೆಯೇ ಈಗ ಸದನವನ್ನು 19ನೇ ಜೂನ್ 2006ರ ಸೋಮವಾರದಂದು ಬೆಳಿಗ್ಗೆ 10-00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 9 ಗಂಟೆ 41 ನಿಮಿಷಕ್ಕೆ ಮುಂದೂಡಲ್ಪಟ್ಟು ದಿನಾಂಕ:19ನೇ ಜೂನ್ 2006ರ ಸೋಮವಾರ 10-00 ಗಂಟೆಗೆ ಸೇರುವಂತೆ ನಿಶ್ಚಯಿಸಿತು.)

## ಅನುಬಂಧ -1

### ಹನ್ನೆರಡನೇ ವಿಧಾನ ಸಭೆ